## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿ ಹೋಬಳಿ ಡಣಾಪುರ ಗ್ರಾಮದ ಹತ್ತಿರ ನಿರ್ಮಾಣವಾಗಿರುವ ಬಿ.ಎಂ.ಎಂ. ಇಸ್ಪಾತ್ ಲಿಮಿಟೆಡ್ ಕಂಪನಿಯ ಆವರಣದ ಒಳಗೆ ಬರುವ ರಸ್ತೆಯನ್ನು ಮೊಟಕುಗೊಳಿಸಿ ಪರ್ಯಾಯ ರಸ್ತೆಯನ್ನು ನಿರ್ಮಿಸಲು ಜಿಲ್ಲಾ ಪಂಚಾಯತಿಯಿಂದ ನಿರಪೇಕ್ಷಣಾ ಪತ್ರ ನೀಡುವ ಸಂಬಂಧ ವರದಿಯನ್ನು ಪಡೆಯಲು ತಂಡ ರಚಿಸುವ ಕುರಿತು.

ಓದಲಾಗಿದೆ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ರವರ ಪತ್ರ ಸಂಖ್ಯೆ:ಜಿಪಂಬ/ಅಭಿವೃದ್ಧಿ-6/ರಸ್ತೆ ಮತ್ತು ಸೇತುವೆ/ಇತರೆ/2014-15/1354, ದಿನಾಂಕ:7-7-2015.

**ಪ್ರಸ್ತಾವನೆ :**

ಹೊಸಪೇಟೆ ತಾಲ್ಲೂಕು, ಮರಿಯಮ್ಮನ ಹೋಬಳಿ, ಡಣಾಪುರ-ಗೂಂಡ ರಸ್ತೆ ಉದ್ದ 6.00ಕಿ.ಮೀ. ಇದ್ದು, ಇದರಲ್ಲಿ ಬಿಎಂಎಂ ಇಸ್ಪಾಟ್ ಸಂಸ್ಥೆಯ ಆವರಣದಲ್ಲಿನ ಜಿ.ಪಂ. ರಸ್ತೆ ಮತ್ತು ಇದಕ್ಕೆ ಪರ್ಯಾಯವಾಗಿ ಸದರಿ ಸಂಸ್ಥೆ ನಿರ್ಮಿಸಿಕೊಟ್ಟಿರುವ ರಸ್ತೆ ಕುರಿತಂತೆ ಕೆಐಎಡಿಬಿ ವತಿಯಿಂದ ನೀಡಿರುವ ಭೂ-ಮಂಜೂರಾತಿ ವಿವರಗಳು, ಸದರಿ ಕಂಪನಿಗೆ ನೀಡಿರುವ ಭೂಮಿಯಲ್ಲಿ ಒಳಗೊಂಡಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗಳು ಅಥವಾ ಇತರೆ ಆಸ್ತಿಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ರಸ್ತೆಗಳ ಬದಲಿಗೆ ಪರ್ಯಾಯವಾಗಿ ನಿರ್ಮಿಸಿರುವ ರಸ್ತೆಗಳು ಇದಕ್ಕೆ ಸ್ಥಳೀಯ ಸಂಸ್ಥೆಗಳ ಸಹಮತಿ ನೀಡಿರುವ ಕುರಿತಂತೆ ತೆಗೆದುಕೊಂಡಿರುವ ಸಭಾ ನಡವಳಿಗಳು ಮತ್ತು ಇತರೆ ದಸ್ತಾವೇಜುಗಳು ಹಾಗೂ ಕಂಪನಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗೆ ಪರ್ಯಾಯವಾಗಿ ನಿರ್ಮಿಸಿರುವ ರಸ್ತೆಯ ಉದ್ದ, ಅಗಲ ಮತ್ತು ಪರಿಮಾಣ ಹಾಗೂ ಗುಣಮಟ್ಟದ ವಿವರಗಳ ಕುರಿತಂತೆ ಸ್ಥಳೀಯ ಕಂದಾಯ ಇಲಾಖೆ, ಕೆಐಎಡಿಬಿ ಮತ್ತು ಜಿಲ್ಲಾ ಪಂಚಾಯತ್ ನ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡಲು ತಂಡ ರಚಿಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:30:ಆರ್‌ಆರ್‌ಸಿ:2015, ಬೆಂಗಳೂರು, ದಿನಾಂಕ:24-8-2015.**

ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿ ಹೋಬಳಿ ಡಣಾಪುರ ಗ್ರಾಮದ ಹತ್ತಿರ ನಿರ್ಮಾಣವಾಗಿರುವ ಬಿ.ಎಂ.ಎಂ. ಇಸ್ಪಾತ್ ಲಿಮಿಟೆಡ್ ಕಂಪನಿಯ ಆವರಣದ ಒಳಗೆ ಬರುವ ರಸ್ತೆಯನ್ನು ಮೊಟಕುಗೊಳಿಸಿ ಪರ್ಯಾಯ ರಸ್ತೆಯನ್ನು ನಿರ್ಮಿಸಲು ಜಿಲ್ಲಾ ಪಂಚಾಯತಿಯಿಂದ ನಿರಪೇಕ್ಷಣಾ ಪತ್ರ ನೀಡುವ ಕುರಿತು

(ಅ) ಕೆಐಎಡಿಬಿ ವತಿಯಿಂದ " ಬಿ.ಎಂ.ಎಂ. ಇಸ್ಪಾತ್ ಲಿಮಿಟೆಡ್ ಕಂಪನಿಗೆ " ನೀಡಿರುವ ಭೂ-ಮಂಜೂರಾತಿ ವಿವರಗಳು

(ಆ) " ಬಿ.ಎಂ.ಎಂ. ಇಸ್ಪಾತ್ ಲಿಮಿಟೆಡ್ ಕಂಪನಿಗೆ " ನೀಡಿರುವ ಭೂಮಿಯಲ್ಲಿ ಒಳಗೊಂಡಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗಳು ಅಥವಾ ಇತರೆ ಆಸ್ತಿಗಳು

(ಇ) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ರಸ್ತೆಗಳ ಬದಲಿಗೆ ಪರ್ಯಾಯವಾಗಿ ನಿರ್ಮಿಸಿರುವ ರಸ್ತೆಗಳು ಇದಕ್ಕೆ ಸ್ಥಳೀಯ ಸಂಸ್ಥೆಗಳ ಸಹಮತಿ ನೀಡಿರುವ ಕುರಿತಂತೆ ತೆಗೆದುಕೊಂಡಿರುವ ಸಭಾ ನಡವಳಿಗಳು ಮತ್ತು ಇತರೆ ದಸ್ತಾವೇಜುಗಳು

(ಈ) ಬಿ.ಎಂ.ಎಂ. ಇಸ್ಪಾತ್ ಲಿಮಿಟೆಡ್ ಕಂಪನಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗೆ ಪರ್ಯಾಯವಾಗಿ ನಿರ್ಮಿಸಿರುವ ರಸ್ತೆಯ ಉದ್ದ, ಅಗಲ ಮತ್ತು ಪರಿಮಾಣ ಹಾಗೂ ಗುಣಮಟ್ಟ

ಈ ಮೇಲ್ಕಂಡ ಅಂಶಗಳ ಕುರಿತು ಕಂದಾಯ ಇಲಾಖೆ, ಕೆಐಎಡಿಬಿ ಮತ್ತು ಜಿಲ್ಲಾ ಪಂಚಾಯತ್ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡಲು ಸರ್ಕಾರವು ಕೆಳಕಂಡಂತೆ ತನಿಖಾ ತಂಡವನ್ನು ರಚಿಸಿ ಆದೇಶವನ್ನು ಹೊರಡಿಸಲಾಗಿದೆ.

1. ನಿರ್ದೇಶಕರು, ಪಂ.ರಾಜ್-1, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ
2. ಮುಖ್ಯ ಇಂಜಿನಿಯರ್, ಪಂ.ರಾ.ಇಂ.ಇಲಾಖೆ
3. ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ

ಈ ಸಮಿತಿಯು ಸ್ಥಳ ಪರಿಶೀಲನೆ ಮಾಡಿದ ವರದಿಯನ್ನು 15 ದಿನಗಳೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/8/16

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ (ಪಂ.ರಾಜ್) ಆಪ್ತ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
3. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.
4. ನಿರ್ದೇಶಕರು, ಪಂ.ರಾಜ್-1, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
5. ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ರವರ ಆಪ್ತ ಸಹಾಯಕರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ರವರಿಗೆ ಕಳುಹಿಸುತ್ತಾ ಸಮಿತಿಯ ತಂಡವು ಜಿಲ್ಲೆಗೆ ಭೇಟಿ ಕೊಡುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಕೆಐಎಡಿಬಿ ಅಧಿಕಾರಿಗಳ ಸಭೆ ಏರ್ಪಡಿಸಲು ಹಗೂ ಅಗತ್ಯ ದಾಖಲೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲು ಕೋರಿದೆ.
7. ರಕ್ಷಾ ಕಡತ / ಹೆಚ್ಚುವರಿ ಪ್ರತಿ.